ತುಂಗಭದ್ರಾ ಜಲಾಶಯದ ಕೆಳಗೆ ಮೇಲುಂಗಾಲುವೆ ನಿರ್ಮಾಣ

೧೬೪೫. ಶ್ರೀ ಬಿ. ಶಿವರಾಮ ರೆಡ್ಡಿ (ಕುರುಗೋಡು).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಜಲಾಶಯದ ಕೆಳಗೆ ರಾಜ್ಯದ ಪಾಲಿನಲ್ಲಿ ಕೊಡಬೇಕಾದ ನೀರಿಗಾಗಿ ಹಿಂದೆ ಹಗರಿ ಅಕ್ವೆಡೇಕ್ಟ್ ಕೆಲಸ ಪ್ರಾರಂಭಿಸಿ ಈಗ ಸುಮಾರು ೩–೪ ವರ್ಷಗಳಿಂದ ನಿಲ್ಲಿಸಿರುವುದಕ್ಕೆ ಕಾರಣವೇನು?

ಆ) ಸದರಿ ಕಾಮಗಾರಿಗೆ ತಗಲುವ ವೆಚ್ಚವೆಷ್ಟು?

ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? ಹಾಗು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ) ಕೆಲಸವು ಕಳೆದ ೨ ವರ್ಷಗಳಿಂದ ನಿಲ್ಲಿಸಲಾಗಿದೆ. ಅಕ್ವೆಡಕ್ಟಿನ ವಿನ್ಯಾಸದಲ್ಲಿ ಪರಿವರ್ತನೆ ಹಾಗೂ ಮೂಲ ಗುತ್ತಿಗೆಯನ್ನು ರದ್ದುಗೊಳಿಸಿ ಹೊಸ ಗುತ್ತಿಗೆ ನೀಡಿಸಬೇಕಾದ್ದರಿಂದ.

ಆ) ಅಕ್ವೆಡಕ್ಟಿನ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ೧೯೮೫–೮೫ರ ದರ ಪಟ್ಟಿಯ ಮೇಲೆ ಸುಮಾರು ಸುಮಾರು ೧೨೫ ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

ಇ) ಹೊಸ ಗುತ್ತಿಗೆ ನೀಡಿಸುವ ಉದ್ದೇಶದಿಂದ ಟೆಂಡರ್ ಕರೆಯಲು ಸರ್ಕಾರದ ಆದೇಶ ನೀಡಲಾಗಿದ್ದು, ನೋಟಿಫಿಕೇಷನ್ ಹೊರಡಿಸಲಾಗಿದೆ. ಕೆಲಸವನ್ನು ೩೨ ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಶ್ರೀ ಬಿ. ಶಿವರಾಮ ರೆಡ್ಡಿ.—ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಈ ಕೆಲಸಕ್ಕೆ ೧೯೮೫–೮೬ ರಲ್ಲಿ ೬೦–೬೫ ಲಕ್ಷ ರೂಪಾಯಿಗಳನ್ನು ಕೊಟ್ಟು ಆದರಲ್ಲಿ ೩೦ ಲಕ್ಷ ಖರ್ಚು ಮಾಡಿದ ಮೇಲೆ ಮತ್ತೆ ೩೦ ಲಕ್ಷ ಕೊಟ್ಟರು. ಆದರಲ್ಲಿ ೨೫ ಲಕ್ಷ ಸಂಬಳಕ್ಕೆ ಕೊಡತಕ್ಕ ಪರಿಸ್ಥಿತಿ ಇದೆ. ಆದುದರಿಂದ ೧೯೮೬–೮೭ರಲ್ಲಿ ಆ ಕೆಲಸವನ್ನು ಪೂರೈಸುವುದಕ್ಕೆ ಸಾಕಷ್ಟು ದುಡ್ಡು ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೆಲಸವನ್ನು ನಾನು ನೋಡಿದ್ದೇನೆ, ನಾನೇ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೇನೆ. ಮಾನ್ಯ ರೆಡ್ಡಿಯವರು ಹೇಳುವುದರಲ್ಲಿ ಸ್ವಲ್ಪ ಸತ್ಯ ಇದೆ. ಇದು ಸಾಕಷ್ಟು ಎಳಂಬವಾಗಿರುವುದು ನಿಜ. ಆದರೆ ಇದಕ್ಕೆ ಎಲ್ಲಾ ಕಾನೂನನ್ನು ಬದಿಗೊತ್ತಿ ಟೆಂಡರ್ ಕರೆಯದೆ ಮಾಡಬೇಕು ಎಂದು ಹೇಳುವುದಕ್ಕಾಗುವುದಿಲ್ಲ: ನಿಯಮಗಳಿವೆ. ಈಗಾಗಲೇ ೩೨ ತಿಂಗಳ ಅವಧಿ ಗೊತ್ತು ಮಾಡಲಾಗಿದೆ. ಟೆಂಡರ್ ಕರೆಯಲು ನೋಟಿಫಿಕೇಷನ್ ಹೊರಡಿಸಲಾಗಿದೆ, ಟೆಂಡರ್ ಬರಲಿ ಒಂದು ವೇಳೆ ಸಮರ್ಪಕವಾದ ಗುತ್ತೇದಾರರು ಮುಂದೆ ಬರುವುದಿಲ್ಲ ಎಂದು ಗೊತ್ತಾದರೆ ಸರ್ಕಾರ ವಿಶೇಷವಾದಂಥ ಅಧಿಕಾರವನ್ನು ಚಲಾಯಿಸಿ ಯಾರು ಜಾಗ್ರತೆ ಮಾಡುತ್ತಾರೋ ಅವರಿಗೆ ಅವಕಾಶ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ವಿಷಯವನ್ನು ಹೇಳುತ್ತೇನೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು ಹುಡುಕಿ ಹುಡುಕಿ ನೋಡುತ್ತಾರೆ. ಅದಕ್ಕೋಸ್ಕರ ಸ್ವಲ್ಪ ನಿಯಮಗಳನ್ನು ನೋಡಬೇಕಾಗಿದೆ ಅಷ್ಟೆ.

ಗಂಗಾವತಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

೧೬೦೪. ಶ್ರೀ ಶ್ರೀರಂಗದೇವರಾಯಲು (ಕನಕಗಿರಿ) —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾವತಿ ತಾಲ್ಲೂಕಿನ ಹೆಬ್ಬಾಳು ಏತ ನೀರಾವರಿ ಯೋಜನೆ ಪೂರ್ಣಗೊಂಡಿದ್ದು ಎಲ್ಲಾ ಸ್ಲೂಯಿಸ್‌ಗಳವರು ಹಾಕಿದ್ದ ಪೈಪುಗಳು ಸೋರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?